ಒ.ಎಸ್.ನಂಬ್ರ: **349/2017** ಡಿ.ಡಬ್ಲ್ಯೂ: **1**

ದಿನಾಂಕಃ 10-03-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಾದ ಶ್ರೀ.ಹೆಚ್ ಎ ಎಸ್ ರವರಿಂದ

ನಾನು 1 ನೇ ಪ್ರತಿವಾದಿಯ ತಂಗಿಯ ಮಗ. 2 ನೇ ಪ್ರತಿವಾದಿ ಶಿವಮೊಗ್ಗದ ಸಾಗರದಲ್ಲಿ ಸುಮಾರು 20 ವರ್ಷಗಳಿಂದ ವಾಸವಾಗಿದ್ದಾರೆ. ಆದರೆ ಊರಿಗೂ ಬಂದು ಹೋಗುತ್ತಿರುತ್ತಾರೆ. 1 ನೇ ಪ್ರತಿವದಿಗೆ ಹುಷಾರಿಲ್ಲ, 2 ನೇ ಪ್ರತಿವಾದಿಗೆ ಹೃದಯ ಸಂಬಂಧಿ ಕಾಯಿಲೆ ಇರುತ್ತದೆ. ಸುಮಾರು 10 ವರ್ಷಗಳಿಂದ 2 ನೇ ಪ್ರತಿವಾದಿಗೆ ಹೃದಯ ಸಂಬಂಧಿ ಖಾಯಿಲೆ ಇರುತ್ತದೆ. 2 ನೇ ಪ್ರತಿವಾದಿಗೆ ಮದುವೆ ಆಗಿದ್ದು, ಗಂಡನ ಮನೆ ಸಾಗರದಲ್ಲಿರುತ್ತದೆ. ಆಕೆಯ ಗಂಡ ಕೃಷಿ ಮಾಡಿಕೊಂಡಿದ್ದಾರೆ. ನನಗೆ ದಾವಾ ಆಸ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ.

ದೇವಿ ಹೆಂಗ್ಸು ನಾಗು ಹೆಂಗ್ಸುರವರ ತಾಯಿ. ದಾವಾ ಸ್ವತ್ತುಗಳು ದೇವಿ ಹೆಂಗ್ಸುರವರಿಗೆ ಭೂಸುಧಾರಣಾ ಕಾಯಿದೆಯಡಿ ಮಂಜೂರಾದ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತುಗಳು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ದೇವಿ ಹೆಂಗ್ಸುರವರ ಸ್ವಂತ ಆಸ್ತಿಯಾಗಿರುತ್ತದೆ. ವಾದಿಗಳು ಮತ್ತು ಪ್ರತಿವಾದಿಗಳು ನಾಗು ಹೆಂಗ್ಸುರವರ ಮಕ್ಕಳು ಎಂದರೆ ಸರಿ. 1997 ರಲ್ಲಿ ನಾಗು ಹೆಂಗ್ಸುರವರು 2 ನೇ ಪ್ರತಿವಾದಿಗೆ ವ್ಯವಸ್ಥಾಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2010-11 ರಲ್ಲಿ ನಾಗು ಹೆಂಗ್ಸುರವರು 2 ನೇ ಪ್ರತಿವಾದಿಗೆ ವ್ಯವಸ್ಥಾ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. 1997 ರಲ್ಲಿ ಒಂದು ವಿಭಾಗ ಪತ್ರ ಆಗಿದೆ ಎಂದರೆ ಸರಿ. 2010-11 ರಲ್ಲಿ 2 ನೇ ಪ್ರತಿವಾದಿಗೆ ಮಾಡಿಕೊಡಲಾದ ವ್ಯವಸ್ಥಾ ಪತ್ರ ಸಿಂಧು ಅಲ್ಲ ಎಂದರೆ ಸರಿಯಲ್ಲ. ಆ ವ್ಯವಸ್ಥಾ ಪತ್ರದಲ್ಲಿ ಒಳಗೊಂಡ ಜಾಗದಲ್ಲಿ ವಾದಿಗಳು ಮತ್ತು ಪ್ರತಿವಾದಿಗಳಿಗೆ ಸಮಾನ ಹಕ್ಕಿದ್ದು, ನಾಗು ಹೆಂಗ್ಸು ಒಬ್ಬರಿಗೆ ಹಕ್ಕಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಲ್ಲಿ ವಾದಿಗಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗಳಿಗೆ ಮತ್ತು ಪ್ರತಿವಾದಿಗಳಿಗೆ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ಈ ವ್ಯಾಜ್ಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, 2 ನೇ ಪ್ರತಿವಾದಿ ಸಾಕ್ಷಿ ಹೇಳಲು ಬರದೇ ಇರುವ ಕಾರಣ ನಾನು ಬಂದು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ಒಮ್ಮೆ ದಾವಾ ಸ್ವತ್ತಿನ ಸ್ಥಳಕ್ಕೆ ಬಂದು ಹೋಗುತ್ತೇನೆ. ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**